**ಮೃತ ಗ್ರಾಹಕರ ಆಸ್ತಿಗಳನ್ನು ಕಾನೂನು ಸಮ್ಮತ ಜೀವಂತವಾರಸುದಾರರಿಗೆ/ ಹಕ್ಕುಸಾಧಕರಿಗೆ ಬಿಡುಗಡೆ ಮಾಡುವುದು**

ಡಿಬಿಒಡಿ. ಬಿಸಿ. ಸಂಖ್ಯೆ. 63/09-07-007/2001-02 ಫೆಬ್ರವರಿ 04, 2002

ಎಲ್ಲ ವಾಣಿಜ್ಯ ಬ್ಯಾಂಕುಗಳಿಗೆ,
(ಆರ್‌ಆರ್‌ಬಿಗಳನ್ನು ಹೊರತುಪಡಿಸಿ)

ಮಾನ್ಯರೇ,

**ಮೃತ ಗ್ರಾಹಕರ ಆಸ್ತಿಗಳನ್ನು ಕಾನೂನು ಸಮ್ಮತ ಜೀವಂತವಾರಸುದಾರರಿಗೆ/ ಹಕ್ಕುಸಾಧಕರಿಗೆ ಬಿಡುಗಡೆ ಮಾಡುವುದು**

ಶಿರೋನಾಮೆಯ ವಿಷಯದ ಬಗ್ಗೆ ಜನವರಿ 1, 2002 ನೇ ದಿನಾಂಕದ ನಮ್ಮ ಸುತ್ತೋಲೆ ಡಿಬಿಒಡಿ.ಬಿಸಿ ಸಂಖ್ಯೆ 55/09.07.007/2001-02ನ್ನು ದಯವಿಟ್ಟು ನೋಡಿ. ಈ ಸಂಬಂಧದಲ್ಲಿ, ಮೇಲಿನ ಸುತ್ತೋಲೆಯಲ್ಲಿ ಈ ಮುಂದಿನ ತಿದ್ದುಪಡಿಗಳನ್ನು ಕೆಳಗೆ ನಿರೂಪಿಸಿರುವ ರೀತಿಯಲ್ಲಿ ಮಾಡಿಕೊಳ್ಳುವಂತೆ ನಿಮ್ಮನ್ನು ಕೋರಲಾಗಿದೆ, ಅಂದರೆ,

(i) ಪ್ಯಾರಾ 1 ರಲ್ಲಿ –

"ಮೃತ ಠೇವಣಿದಾರರ ಖಾತೆಯಲ್ಲಿರುವ ಹಣ 25,000/– ರೂಪಾಯಿಗಳನ್ನು ಮೀರದಿದ್ದಲ್ಲಿ" ಎಂಬುದಕ್ಕೆ ಬದಲಾಗಿ "ಮೃತ ಠೇವಣಿದಾರರ ಖಾತೆಯಲ್ಲಿರುವ ಹಣವನ್ನು ಗಣನೆಗೆ ತೆಗೆದುಕೊಳ್ಳದೆ" ಎಂಬುದನ್ನು ಪ್ರತಿಸ್ಥಾಪಿಸತಕ್ಕದ್ದು.

(ii) ಪ್ಯಾರಾ 3 ರಲ್ಲಿ–

" ಪರಿಶೀಲನೆಯಲ್ಲಿರುವ ಸುತ್ತೋಲೆಯ 3ನೇ ಪ್ಯಾರಾದ 3ನೇ ಸಾಲಿನಲ್ಲಿರುವ " ಹಣವನ್ನು ಗಣನೆಗೆ ತೆಗೆದುಕೊಳ್ಳದೆ " ಎಂಬ ಪದಗಳನ್ನು " ಮೃತ ಗ್ರಾಹಕರ " ಮತ್ತು " ಒಳಪಟ್ಟು " ಎಂಬ ಪದಗಳ ನಡುವೆ ಸೇರಿಸತಕ್ಕದ್ದು.

2. ಹೀಗಾಗಿ ಪರಿಶೀಲನೆಯಲ್ಲಿರುವ ಮೇಲಿನ ನಮ್ಮ ಸುತ್ತೋಲೆಯಲ್ಲಿ ತಿಳಿಸಿರುವ ಸುರಕ್ಷತಾ ಕ್ರಮಗಳಿಗೆ ಒಳಪಟ್ಟು ಇತರ ಆಸ್ತಿಗಳನ್ನು ಅವುಗಳ ಮೌಲ್ಯವನ್ನು ಗಣನೆಗೆ ತೆಗೆದುಕೊಳ್ಳದೆ ಬಿಡುಗಡೆ ಮಾಡಬಹುದು.

4. ದಯವಿಟ್ಟು ಸ್ವೀಕೃತಿ ನೀಡಿ.

ತಮ್ಮ ವಿಶ್ವಾಸಿ,

(ಕೆ. ಎನ್. ರೂಪಾನಿ)
ಉಪ ಪ್ರಧಾನ ವ್ಯವಸ್ಥಾಪಕ.